# ‘ಬದ್ಧತೆ ಇಲ್ಲದಿದ್ದರೆ ಅವಕಾಶವೂ ಇಲ್ಲ

**ರವಿಕಿರಣ್**
**ಕಲರ್ಸ್ ಕನ್ನಡದ ‘ಗಂಡ ಹೆಂಡ್ತಿ’ಯ ರಾಮ್ ಪ್ರಸಾದ್**



◆ **ನಿಮ್ಮ ಪಾತ್ರ ಹೇಗಿದೆ?**

ತಂದೆಯ ಪಾತ್ರವನ್ನು ನಿರ್ವಹಿಸುತ್ತಿದ್ದೇನೆ. ಆರ್.ಪಿ. ಎಂದೇ ಎಲ್ಲರೂ ಸಂಬೋಧಿಸುತ್ತಾರೆ. ಪಾತ್ರ ಜಾಲಿಯಾಗಿ ಸಾಗುತ್ತದೆ. ಇಬ್ಬರು ಗಂಡುಮಕ್ಕಳು, ಒಬ್ಬ ಮಗಳು. ದೊಡ್ಡಮಗನಿಗೆ ಮದುವೆಯಾಗಿದೆ. ಅವನ ಹೆಂಡತಿಯ ತಂಗಿಯನ್ನೇ ಎರಡನೇ ಮಗನಿಗೆ ತರಬೇಕು ಎಂಬ ಯೋಚನೆಯಿದೆ. ಉಭಯ ಕುಟುಂಬಸ್ಥರೂ ಮಾತನಾಡಿ ಒಮ್ಮತಕ್ಕೆ ಬಂದಿದ್ದೇವೆ. ಅದೇ ಸಮಯಕ್ಕೆ ಕಥೆ ಸ್ಫೋಟಕ ತಿರುವು ಪಡೆಯುತ್ತಿದೆ. ಕುತೂಹಲವನ್ನು ಹುಟ್ಟಿಸುವ ಅದು ಮುಂದೆ ಹೇಗೆ ಸಾಗುತ್ತದೆ ಎಂದು ತಿಳಿಯಬೇಕಿದೆ.

◆ **ಕ್ರಿಯೇಟಿವಿಟಿ ನಡುವೆ ರಾಜಕಾರಣ ಅದರ ನಡುವೆ ಬಿಡುವು. ಇದರ ವಿಶೇಷ ಏನು?**

ಒಮ್ಮೆ ಕ್ರಿಯೇಟಿವಿಟಿ ಕ್ಷೇತ್ರಕ್ಕೆ ಬಂದರೆ ಶಾಶ್ವತವಾಗಿ ನಮ್ಮನ್ನು ಆವರಿಸುತ್ತದೆ. ಜೀವ ಇರುವ ತನಕ ಅದು ಬೆಸೆದುಕೊಂಡೇ ಸಾಗುತ್ತದೆ. ಒಂದಿಷ್ಟು ಕಾಲ ಬರವಣಿಗೆ–ಸಂಕಲನದಲ್ಲಿ ತೊಡಗಿದ್ದೆ. ಮಧ್ಯದಲ್ಲಿ ಸ್ವಲ್ಪ ದಿನ ಬಿಡುವು ಮಾಡಿಕೊಂಡಿದ್ದೆ. ನಮ್ಮದೇ ಸ್ಟುಡಿಯೊ ಇದೆ. ಎರಡು ಸಿನಿಮಾಗಳನ್ನು ನಿರ್ಮಾಣ ಮಾಡಿದ್ದೇವೆ. ಸಾಮಾನ್ಯವಾಗಿ ಎಲ್ಲರಲ್ಲೂ ಒಬ್ಬ ರಾಜಕಾರಣಿ ಇರುತ್ತಾನೆ. ಮತದಾರನಾಗಿ ರಾಜಕೀಯ ಆಸಕ್ತಿ ಇರುವಂತೆ, ಆತ ಒಳಗಿಂದೊಳಗೆ ರಾಜಕಾರಣವನ್ನೂ ಮಾಡುತ್ತಿರುತ್ತಾನೆ. ಒಬ್ಬರ ಬಗ್ಗೆ ಮತ್ತೊಬ್ಬ ಮಾತನಾಡಲು ಅದುವೇ ಕಾರಣವಾಗಬಹುದು. ಗೊತ್ತಿದ್ದೋ ಗೊತ್ತಿಲ್ಲದೆಯೋ ಎಲ್ಲರೂ ರಾಜಕಾರಣಿಯೇ. ಯಾರೂ ಕೂಡ ರಾಜಕೀಯದಿಂದ ಮುಕ್ತವಾಗಿ ಇರಲು ಆಗುವುದಿಲ್ಲ. ತುಂಬ ವರ್ಷಗಳ ನಂತರ ಬಣ್ಣ ಹಚ್ಚಿದ್ದೇನೆ. ಭಾವನಾತ್ಮಕವಾದ ಈ ಪಾತ್ರ ವೀಕ್ಷಕರಿಗೆ ಇಷ್ಟ ಆಗಿದೆ ಎಂದು ಕೇಳಿದ್ದೇನೆ.

◆ **ಅಭಿನಯದ ಜೊತೆ ತಾಂತ್ರಿಕ ಕೆಲಸ ಬಲ್ಲ ನಿಮಗೆ ಯಾವುದು ಆಪ್ತ ಅನ್ನಿಸುತ್ತದೆ?**

ಈಗ ನಟನೆ ಮಾಡುತ್ತಿದ್ದರೂ ಶಾಟ್ಸ್ ಹೇಗೆ ತೆಗೆಯುತ್ತಿದ್ದಾರೆ. ಯಾವ ಕ್ಯಾಮೆರಾ ಬಳಸುತ್ತಿದ್ದಾರೆ ಎನ್ನುವ ಯೋಚನೆ ಬರುತ್ತದೆ. ಇಲ್ಲಿ ನನ್ನ ಅಭಿನಯ ಹೇಗಿರಬೇಕು ಎಂದು ಯೋಚಿಸುತ್ತೇನೆ. ನಿರ್ದೇಶಕನಾಗಿದ್ದರೆ ನನ್ನ ನಿರೀಕ್ಷೆ ಏನಿರುತ್ತದೆ ಅದೆಲ್ಲ ನೆನಪಾಗುತ್ತದೆ. ಡೈಲಾಗ್ ಹೇಗೆ ಆರಂಭಿಸಬೇಕು, ಯಾವ ಕ್ಷಣಕ್ಕೆ ನಿಲ್ಲಿಸಬೇಕು ಎನ್ನುವ ವಿಚಾರವೆಲ್ಲ ಕೆಲಸ ಮಾಡುತ್ತಿರುತ್ತದೆ. ಎಲ್ಲ ನಿರ್ದೇಶಕರಿಗೂ ಸಂಕಲನದ ಐಡಿಯಾ ಇದ್ದರೆ ಕೆಲಸ ಅನುಕೂಲವಾಗುತ್ತದೆ. ಇಲ್ಲದಿದ್ದರೆ ಶಾಟ್ಸ್‌ಗಳನ್ನು ವಿಸ್ತಾರವಾಗಿ ತೆಗೆದುಕೊಂಡು ಸಂಕಲನಕ್ಕೆ ಅವಕಾಶ ಬಿಟ್ಟುಕೊಳ್ಳಬೇಕಾಗುತ್ತದೆ.

◆ **ನಿಮ್ಮ ಕುಟುಂಬದ ಸದಸ್ಯರ ಜೊತೆ ಬಣ್ಣದ ಲೋಕದ ಬಗ್ಗೆ ಚರ್ಚೆ ಬಂದರೆ...**

ನಿಜ ಹೇಳಬೇಕು ಅಂದರೆ, ನನ್ನ ಹೆಂಡತಿ ದೊಡ್ಡ ಕ್ರಿಟಿಕ್. ದಾಂಪತ್ಯದ ಆರಂಭದ ದಿನಗಳಲ್ಲಿ ಕೆಲವೊಂದು ಪ್ರಶ್ನೆಗಳು ಏಳುತ್ತಿದ್ದವು. ಭಾವನಾತ್ಮಕ ದೃಶ್ಯಗಳ ಸಂದರ್ಭದಲ್ಲಿ ತಬ್ಬಿಕೊಳ್ಳುವ ಸನ್ನಿವೇಶವನ್ನು ತಂದರೆ ಅದಕ್ಕೂ ಸುಧಾರಿಸಬೇಕಿತ್ತು. ತಬ್ಬಿಕೊಳ್ಳುವ ದೃಶ್ಯ ಏಕೆ ಬೇಕು ಎಂದೂ ಕೇಳುತ್ತಿದ್ದರು. ಈಗ ಹಾಗೇನೂ ಇಲ್ಲ. ಏನೇ ಇದ್ದರೂ ವಿಮರ್ಶೆಯನ್ನು ಪ್ರಾಮಾಣಿಕವಾಗಿ ಮಾಡುತ್ತಾರೆ. ನಿರ್ದೇಶನ–ಕ್ಯಾಮೆರಾ– ನಟನೆಯ ಇತಿಮಿತಿಗಳನ್ನೂ ಗುರುತಿಸುವ ಕೌಶಲ್ಯ ಅವರಿಗಿದೆ. ಎಲ್ಲರ ಕಾಮೆಂಟುಗಳನ್ನು ಪಾಸಿಟಿವ್ಆಗಿ ನಾನು ತೆಗೆದುಕೊಳ್ಳುತ್ತೇನೆ. ಮಗ ಎರಡು ಸಿನಿಮಾ ಮಾಡಿದ್ದಾನೆ. ‘ಪರಿವರ್ತನೆ’ ಬಿಡುಗಡೆ ಆಗಿದೆ. ‘ಪ್ರೀತ್ಸೋಣ ಮತ್ತೊಮ್ಮೆ’ಯಲ್ಲಿ ಕುರುಡನ ಪಾತ್ರವನ್ನು ಮಾಡಿದ್ದಾನೆ. ನಂತರದಲ್ಲಿ ಅವನಿಗೆ ಕಣ್ಣು ಬರುತ್ತವೆ. ಕುರುಡನಾಗಿದ್ದಾಗ ಅವನ ಜೀವನ ಹೇಗಿತ್ತು? ದೃಷ್ಟಿ ಬಂದ ನಂತರ ಹೇಗಿದೆ? ಅವನ ಪ್ರಿಯತಮೆಯ ವಿಷಯದಲ್ಲಿಯೂ ಉಂಟಾಗುವ ಬದಲಾವಣೆ ಈ ಸಿನಿಮಾದ ಹೂರಣ. ಸದ್ಯ ರಿಲೀಸ್ ಮಾಡಬೇಕಿದೆ.

◆ **ನಿಮ್ಮ ವೃತ್ತಿಯ ಆರಂಭದ ದಿನಗಳಿಗೆ ಹೋಲಿಸಿದರೆ, ಈಗ ಬದ್ಧತೆಯ ವಿಷಯದಲ್ಲಿ ತಿಳಿ ಆಯಿತು ಎಂದು ಅನ್ನಿಸುತ್ತಾ?**

ವೃತ್ತಿಪರತೆ ಇಲ್ಲದೇ ಏನೂ ಆಗಲ್ಲ. ಅದು ಇದ್ದೇ ಇರುತ್ತದೆ. ಇಲ್ಲಿದ್ದರೆ ಇರಲು ಸಾಧ್ಯವೇ ಇಲ್ಲ. ವೃತ್ತಿಪರತೆ ಇಲ್ಲದಿದ್ದರೆ ಅವಕಾಶವೂ ಇಲ್ಲ ಎಂದರ್ಥ. ಕೆಲಸಕ್ಕೆ ಪೂರಕವಾಗಿ ಬದ್ಧತೆ ಇರಲೇಬೇಕು. ಈಗ ಸರಿ ಸುಮಾರು 60 ಧಾರಾವಾಹಿಗಳು ನಡೆಯುತ್ತಿವೆ. ಆ ಪ್ರಮಾಣಕ್ಕೆ ಕಲಾವಿದರು ಕಡಿಮೆ ಇದ್ದಾರೆ. ಒಂದು ಧಾರಾವಾಹಿಯಲ್ಲಿ ನಟಿಸುತ್ತಿದ್ದರೆ, ಮತ್ತೊಂದರಲ್ಲಿ ನಟಿಸುವುದಕ್ಕೆ ಸಾಕಷ್ಟು ತಾಂತ್ರಿಕ ಮಿತಿಗಳು ಇರುತ್ತವೆ. ಒಂದು ಎಪಿಸೋಡ್ ಮುಗಿದರೆ ಅದು ಮುಂದೆ ಎಂದೂ ಬರುವುದಿಲ್ಲ. ಇತ್ತೀಚೆಗೆ ಒಟಿಟಿ ಪ್ಲಾಟ್‌ಫಾರಂ, ಯೂಟ್ಯೂಬ್ ಕಾಪಿ ಲಭ್ಯ ಇರುವುದರಿಂದ ಆಸಕ್ತರು ಹುಡುಕಿ ನೋಡಬಹುದು. ನಿತ್ಯವೂ 60 ಧಾರಾವಾಹಿಗಳೂ ತಮ್ಮ ಪ್ರೊಡಕ್ಷನ್ ನೀಡಲೇಬೇಕು. ನಿರ್ದೇಶಕ ಕಥೆ ಕ್ರಿಯೆಟ್ ಮಾಡಲೇಬೇಕು, ಕ್ಯಾಮೆರಾ ಹೊಸ ತಂತ್ರಗಳನ್ನು ಹೆಣೆಯಬೇಕು, ನಟರಿಗೆ ಭಾವನೆಗಳನ್ನು ತುಂಬಬೇಕು. ಎಲ್ಲರೂ ಕೆಲಸ ಮಾಡುತ್ತಲೇ ಇರಬೇಕು. ಆದರೂ ಹೊಸತನ ಇರುತ್ತದೆ. ಏಕತಾನತೆ ಎಂದು ಅನ್ನಿಸುವುದಿಲ್ಲ. ಇಂತಹ ಕ್ಷೇತ್ರದಲ್ಲಿರುವುದು ನನ್ನ ಅದೃಷ್ಟ ಎಂದು ಅಂದುಕೊಂಡಿದ್ದೇನೆ.

■ **ರಾಘವೇಂದ್ರ ಕೆ.**